ಶ್ರೀ ಎಸ್. ಆರ್ ಬೊಮ್ಮಾಯಿ.—ತಮಗೆ ಅಧಿಕಾರ ಇದೆ. ಇದು ನಾಗರೀಕರ ಮೇಲೆ ೫೦ ಕೋಟಿ ರೂಪಾಯಿಗಳ ಟ್ಯಾಕ್ಸನ್ನು ಹಾಕತಕ್ಕ ಬಿಲ್. ಇದರ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ, ತಿದ್ದುಪಡಿಗಳನ್ನು ತರುವುದಕ್ಕೆ ಅವಕಾಶ ಕೊಡದೆ, ವಿವರವಾದ ಚರ್ಚೆಗೆ ಅವಕಾಶ ಕೊಡದೆ ತಮ್ಮ ಅಧಿಕಾರವನ್ನು ಉಪಯೋಗಿಸಬಹುದೇ ? The chair has got the discretion, but it cannot be used arbitrarily.

ಅಧ್ಯಕ್ಷರು.—ತಮಗೆ ಚರ್ಚೆಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ತಿದ್ದುಪಡಿಗಳನ್ನು ತರುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ:—ನಮಗೆ ಇದನ್ನು ಓದುವುದಕ್ಕೆ ಅವಕಾಶ ಬೇಕಲ್ಲ. Again, I appeal through you Sir, to the Chief Minister to take up this in the next sitting. We will agree for having a retrospective effect, snd if necessary the Government may issue an Ordinance.

ಅಧ್ಯಕ್ಷರು.—ಬೇಕಾದರೆ ೧೫-೨೦ ನಿಮಿಷಗಳ ಕಾಲ ಪೌಸ್ ಆಜ್ಜರ್ನ್ ಮಾಡೋಣ, ನೀವು ತಿದ್ದುಪಡಿಗಳನ್ನು ಕೊಡಿ.

Sri D. Devaraj Urs.—Sir, we have taken a decision to abolish the octroi from 1st April 1979. I request the hon. Opposition members to co-operate with the Government. There are only a few amendments. There is nothing to go through about the consequential amendments ; there is not much either. The collection of octroi from various sources will have to be taken away, and we have decided to remove this from 1st of April 1979. Therefore this has become necessary.

ಶ್ರೀ ಜಿ. ಎಚ್. ಪಟೀಲ್.—ಆಕ್ಟ್ಯನ್ನು ರದ್ದುಮಾಡಬೇಕು ಎನ್ನುವ ಕಾರಣದಿಂದ ಇದನ್ನು ಪಾಸ್ ಮ್ಯಾಡಲೇಬೇಕೂ ಎಂದು ಸರ್ಕಾರದ ಪ್ರತಿಯಿಂದ ವಿವರಣೆ ಕೊಟ್ಟರಕ್ಕಂಥಾದ್ದು ಸರಿ ಎಂದು ಕಾಣುತ್ತದೆ. ಆದರೆ ಇಷ್ಟೊಂದಂ ತೀವ್ರವಾಗಿ ಪರಿಣಾಮಕಾರಿಯಾಗಿ ಆಗತಕ್ಕ ಕಾನೂನನ್ನು ಚರ್ಚೆ ಮಾಡದೆ, ಆದರ ಲೋಪದೋಷಗಳೇನಿವೆ ಎಂಬುದನ್ನು ತಿಳಿದುಕೊಳ್ಳದೆ ಇವತ್ತು ನಾಳೆಯಲ್ಲಿ ಮಾಡುವುದಕ್ಕಾಗುವುದಿಲ್ಲ.

ಆದಕೋಸ್ಕರ ಅವರ ಕಷ್ಟವನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ನಾವು ನಮ್ಮ ಕಷ್ಟವನ್ನು ಹೇಳಿದ್ದೇವೆ. ಇವತ್ತು ಅವರು ಇದನ್ನು ಪಾಸ್ ಮಾಡಲೇ ಬೇಕು ಎನ್ನುವ ಉದ್ದೇಶವಿಟ್ಟುಕೊಂಡಿರುವುದರಿಂದ ನಾವು ಹೊರಗಡೆ ಹೊರಟು ಹೋಗುತ್ತೇವೆ ಬೇಕಾದರೆ ಅವರು ಪೌಸ್ ಮಾಡಿಕೊಳ್ಳಲಿ.

ಶ್ರೀ ಭೀಮಣ್ಣ ಖಂಡ್ರೆ.—ಓಟ್ ಆನ್ ಅಕೌಂಟ್‌ನ್ನು ಸ್ವಾಗತ ಮಾಡಿದ್ದೇವೆ. ಪ್ರತಿಯೊಂದ ರಲ್ಲಿಯೂ ನಾವು ನಿಮಗೆ ಸಹಕಾರ ಕೊಟ್ಟುಕೊಂಡು ಬರುತ್ತಿದ್ದೇವೆ. ಆದರೆ ಇಂಥ ವಿಷಯಗಳಲ್ಲಿ ತಾವು ಈ ರೀತಿ ಮಾಡುವುದು ಸರಿಯಲ್ಲ. ಮುಖ್ಯಮಂತ್ರಿಗಳವರು ಇಷ್ಟು ಅಡ್‌ವೆಂಟ್ ಆಗಿರಬಾರದು.

(ಶ್ರೀ ಟಿ. ಆರ್. ಶಾಮಣ್ಣ ಮತ್ತು ಶ್ರೀ ಮಳ್ಳೂರು ಆನಂದರಾವ್ ಶ್ರೀ ಸಿ. ಏಂ. ಆರ್ಯುಗಂ ಬಿಟ್ಟು ಬಾಕಿ ಉಳಿದ ವಿರೋಧ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು).

ಶ್ರೀ ಡಿ. ದೇವರಾಜ್ ಅರಸ್.—ಬರೀ ಹೊರಗಡೆ ಹೋಗುವುದರಿಂದ ತಮ್ಮ ಜವಾಬ್ದಾರಿಯನ್ನು ಅವರು ಮಾಡಿದ ಹಾಗೆ ಆಗಲಿಲ್ಲ ಇದನ್ನು ಅವರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಪುನಃ ಹೊರಗಡೆ ಇದನ್ನು ಹಾಕುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದೆವು ಎಂದು ಹೇಳುವುದಕ್ಕೆ ಹೋಗುತ್ತೀರಿ ಅದು ಏನು ನಡೆಯುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ಉತ್ತರ ಕೊಡಬೇ ತಾವು ಮುಂದುವರಿಸುವ ಹಾಗಿಲ್ಲ ಇದುದರಿಂದ ದಯವಿಟ್ಟು ತಾವು ರೂಲಿಂಗ್ ಕೊಡಬೇಕು.